**ಅಸಲು ದಾವಾ ಸಂಖ್ಯೆ: 522/2020**
**ಪಿಡಬ್ಲೂ -1**

**ದಿಃ 23-03-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. YGG ರವರಿಂದಃ-**

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ಆಯುಕ್ತರು, ಬೆಳಗಾವಿ ಮಹಾನಗರ ಪಾಲಿಕೆ ಇವರಿಗೆ ದಿಃ 19-03-2020 ರಂದು ನೀಡಿದ ಅರ್ಜಿ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು,

ಉದ್ಯಮಬಾಗ ಪೋಲಿಸ ಠಾಣೆಯವರು ನೀಡಿದ ಹಿಂಬರಹಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-2 ಮತ್ತು 3 ಎಂದು,

ನನ್ನ ದತ್ತಕ ತಂದೆ ಭರಮಪ್ಪ ಕುಬೇರಪ್ಪ ನರಸಗೌಡ ರವರು ನನ್ನ ದತ್ತಕ ತಾಯಿಯಾದ ದೇವಕಿಬಾಯಿ ಅಲಿಯಾಸ ಪುಟ್ಟವ್ವ ರವರಿಗೆ ದಿಃ 02-09-1961 ರಂದು ಬರೆದುಕೊಟ್ಟ ದಾನಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಸದರಿ ಮೂಲ ದಾನಪತ್ರವನ್ನು ಆರ್.ಎಸ್.ಎ ನಂಬರ 6110/2010 ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ. ಆದ್ದರಿಂದ ದಾನಪತ್ರದ ದೃಡೀಕೃತ ನಕಲನ್ನು ನಿಪಿ-4 ಎಂದು, ಗುರುತಿಸಲಾಯಿತು.

ಸದರಿ ದಾಖಲೆ ಮರಾಠಿ ಭಾಷೆಯಲ್ಲಿ ಇದ್ದು, ಅದನ್ನು ಅದರ ಆಂಗ್ಲ ಅಥವಾ ಕನ್ನಡ ಭಾಷೆಯ ತರ್ಜುಮೆ ಪ್ರತಿಯನ್ನು ಹಾಜರುಪಡಿಸುವ ಶರತ್ತಿಗೆ ಒಳಪಟ್ಟು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂದಿಸಿದ ಆಸ್ತಿ ತೆರಿಗೆ ವಿವರ ಪಟ್ಟಿ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-5 ಎಂದು,

ದಾವಾ ಸ್ವತ್ತಿಗೆ ಸಂಬಂಧಿಸಿದ 2018-19, 2017-18 ನೇ ಸಾಲಿನ ಆಸ್ತಿ ತೆರಿಗೆ ವಿವರ ಪಟ್ಟಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-6 ಮತ್ತು 7 ಎಂದು,

ದಾವಾ ಸ್ವತ್ತಿಗೆ ಸಂಬಂಧಿಸಿದ ತೆರಿಗೆ ಪಾವತಿ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-8 ರಿಂದ 10 ಎಂದು,

ನನ್ನ ಹಾಗೂ ಪ್ರತಿವಾದಿಯರ ಆಸ್ತಿಯ ನಡುವೆ ಇರುವ ಸಮಾಯಿಕ ಗೋಡೆಗೆ ಸಂಬಂಧಪಟ್ಟಂತೆ ಇರುವ ನೋಂದಾಯಿತ ಕರಾರು ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-11 ಎಂದು,

ಸದರಿ ದಾಖಲೆಯು ಮರಾಠಿ ಭಾಷೆಯಲ್ಲಿ ಇದ್ದು, ಅದರ ಕನ್ನಡ ಭಾಷೆಯ ತರ್ಜುಮೆ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-11(ಎ) ಎಂದು,

ದಾವಾ ಸ್ವತ್ತಿಗೆ ಸಂಬಂಧಿಸಿದ ಛಾಯಾ ಚಿತ್ರಗಳನ್ನು, ಸಿ.ಡಿ ಹಾಗೂ ಕಲಂ 65B ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-12 ರಿಂದ 35 ಎಂದು, ಗುರುತಿಸಲಾಯಿತು.

**ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶವನ್ನು ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**